ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಅಲ್ಲಿ 220 KV ಲೈನ್ ಬದಲಾವಣೆಯಾಗಬೇಕಾಗಿದೆ. ನಾವು ಪತ್ರ KPTCL ಗೆ ಬರೆದಿದ್ದೇವೆ. ಅವರು ತಾಂತ್ರಿಕವಾಗಿ ಸ್ವಲ್ಪ ಸಮಸ್ಯೆಯಿದೆ ಎಂದು ಹೇಳುತ್ತಿದ್ದಾರೆ. ನಾವು ಅವರಿಗೆ ಎಷ್ಟು ಹಣ ಖರ್ಚಾದರೂ ಸಹ ಕೊಡುತ್ತೇವೆಂದು ಹೇಳಿದ್ದೇವೆ. ಇದರ ಬಗ್ಗೆ pursue ಮಾಡುವುದಕ್ಕೆ ನಾನು ಎಂ.ಡಿ.ಯವರಿಗೆ ಹೇಳಿದ್ದೇನೆ. ಮಾನ್ಯ ಸುರೇಶ್ ಕುಮಾರ್ ರವರು ಸಹ ಇದಕ್ಕೆ ಸಹಾಯ ಮಾಡಲಿ. ಈ ಕೆಲಸ ಮುಗಿದ ತಕ್ಷಣ ಬಸ್ ನಿಲ್ದಾಣವನ್ನು ಯಾವ ರೀತಿ ಬೇಕೊ ಆ ರೀತಿ ಕಟ್ಟಿಸಿಕೊಳ್ಳೋಣ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಾರಿಗೆ ಸಚಿವರಿರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, KPTCL ರವರಿಗೆ ಏನು ಪತ್ರ ಬರೆದಿದ್ದಾರೆ, ಅವರು ಆ ಪ್ರತಿಯನ್ನು ನನಗೆ ಕೊಡಲಿ. ನಾನು ಅದನ್ನು pursue ಮಾಡಿಸಿ ಮಾಡಿಸಿಕೊಡುತ್ತೇನೆ.

ಇಲಾಖೆಯ ಅಭಿವೃದ್ಧಿ ಯೋಜನೆಗಳು

49(322); ಶ್ರೀ ಶ್ರೀನಿವಾಸ್ ಜಿ.ಎಚ್. (ತರೀಕೆರೆ)

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಮಂಡಳಿಗಳ ಯೋಜನೆಗಳು ಜನ ಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಮಾಹಿತಿಯ ಕೊರತೆಯಿದೆಯೇ ಮತ್ತು ಅತೀ ಬಿಗಿಯಾದ ನಿಯಮಗಳು ಸಲ್ಲಿಸಬೇಕಾದ ದಾಖಲೆಗಳ ಸರಳೀಕರಣ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಸರ್ಕಾರದ ನಿರ್ಧಾರವೇನು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು)

(ಶ್ರೀ ಹೆಚ್. ಆಂಜನೇಯ ಅವರ ಪರವಾಗಿ) (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಇಲ್ಲ.

No

ಆ) ಅನ್ವಯಿಸುವುದಿಲ್ಲ.

Does not arise

ಶ್ರೀ ಶ್ರೀನಿವಾಸ್ ಜಿ.ಎಚ್.:– ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ದಲಿತರಿಗೆ ಕೊಡುತ್ತಿರುವಂಥ ಹಲವಾರು ಯೋಜನೆಗಳು ಅವರ ಕೈ ಸೇರುತ್ತಿಲ್ಲ. ಯೋಜನೆಗಳ ಲಾಭವನ್ನು ಬೇರೆಯವರು, ಬಲಿಷ್ಠರು ಪಡೆದುಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಟಾರ್ಪಾಲಿನ್ ತೆಗೆದುಕೊಳ್ಳುವುದು, ಟ್ರಾಕ್ಟರ್ ತೆಗೆದುಕೊಳ್ಳುವುದು ಸರ್ಕಾರದ ಯಾವುದೇ ಯೋಜನೆಗಳಿದ್ದರೂ ಸಹ ಮೇಲ್ಜಾತಿಯವರು ತೆಗೆದುಕೊಳ್ಳುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವಂಥ ವಿಚಾರ. ಆದರೆ, ಸಮಾಜ ಕಲ್ಯಾಣ ಸಚಿವರು ಸರ್ಕಾರದ ಗಮನಕ್ಕೆ ಬಂದಿಲ್ಲ ಎನ್ನುವ ರೀತಿಯಲ್ಲಿ ಉತ್ತರ ಕೊಡುತ್ತಿದ್ದಾರೆ. ಇದು ತುಂಬಾ ನೋವಿನ ವಿಚಾರ.

ಶ್ರೀ ಎಸ್. ಸುರೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಸಚಿವರು ಸದನದಲ್ಲಿ ಉತ್ತರ ಕೊಡುವಾಗ ಸತ್ಯವಾದ ಉತ್ತರ ಕೊಡಬೇಕೋ ಅಥವಾ ಸತ್ಯಕ್ಕೆ ದೂರವಾದ ಉತ್ತರ ಕೊಡಬೇಕೋ?

ಅಧ್ಯಕ್ಷರು:– ಸತ್ಯವಾದ ಉತ್ತರ ಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್:– ಪ್ರಶ್ನೆ ಇರುವುದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ / ಮಂಡಳಿಗಳ ಯೋಜನೆಗಳು ಜನ ಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂಬುದಕ್ಕೆ ಇಲ್ಲ ಎಂದು ಉತ್ತರ ಕೊಡುತ್ತಾರೆ.

ಅಧ್ಯಕ್ಷರು:– ವಿಫಲ. ಯೋಜನೆಗಳು ಜನಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗುತ್ತಿರುವುದು..

ಶ್ರೀ ಎಸ್. ಸುರೇಶ್‌ಕುಮಾರ್:– ಮುಂದಿನ ಪ್ರಶ್ನೆ ವಿಶೇಷವಾಗಿದೆ. ಅತೀ ಬಿಗಿಯಾದ ನಿಯಮಗಳು ಸಲ್ಲಿಸಬೇಕಾದ ದಾಖಲಾತಿಗಳ ಸರಳೀಕರಣ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಸರ್ಕಾರದ ನಿರ್ಧಾರವೇನು? ಎಂಬ ಪ್ರಶ್ನೆಗೆ ಉತ್ತರ ಅನ್ವಯಿಸುವುದಿಲ್ಲ ಎಂದು ನೀಡಿದ್ದಾರೆ.

ಶ್ರೀ ಶ್ರೀನಿವಾಸ್ ಜಿ.ಎಚ್.:– ಇದು ತಪ್ಪು ಉತ್ತರ.

ಶ್ರೀ ಎಸ್. ಸುರೇಶ್ ಕುಮಾರ್:– ಇದು ನಿಜವಾದ ಉತ್ತರವೇ ಸ್ವಾಮಿ. ಅದಕ್ಕಾಗಿಯೇ ನಾನು ಹೇಳಿದ್ದು, ಸತ್ಯದ ಉತ್ತರಕ್ಕೆ ಇಲ್ಲಿಂದ ಶಿರಾದಷ್ಟು ದೂರವೋ ಅಥವಾ ಇಲ್ಲಿಂದ ಚಿತ್ರದುರ್ಗದಷ್ಟು ದೂರವೋ ಎಂದು, ದಯವಿಟ್ಟು ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಸಮಾಜ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವಂಥ ನೇರ ಪ್ರಶ್ನೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ ಮಂಡಳಿಗಳ ಯೋಜನೆಗಳು ಜನ ಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎನ್ನುವುದಕ್ಕೆ ಇಲ್ಲ ಎಂದು ಉತ್ತರ ಹೇಳಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್:– ಈ ರೀತಿ ಉತ್ತರ ಹೇಳುವುದಕ್ಕೆ ಧೈರ್ಯ ಬೇಕು. ಸರ್ಕಾರದ ಧೈರ್ಯವನ್ನು ನಾನು ಮೆಚ್ಚುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಧೈರ್ಯವಾಗಿಯೇ ಹೇಳುತ್ತಿದ್ದೇನೆ. ಸರ್ಕಾರವು ಯೋಜನೆಗಳನ್ನು ರೂಪಿಸಿ, ಅದಕ್ಕನುಗುಣವಾಗಿ ಹಣವನ್ನು ಬಿಡುಗಡೆ ಮಾಡುತ್ತಿರುತ್ತದೆ. ಅದರ ಆಧಾರದ ಮೇಲೆ ಹೇಳಬೇಕಾಗುತ್ತದೆಯೇ ಹೊರತು ಬೇರೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್:– ಸರ್ಕಾರ ಯೋಜನೆಗಳನ್ನು ರೂಪಿಸುತ್ತಿದೆ, ಅದರಲ್ಲಿ ಎರಡು ಮಾತಿಲ್ಲ. ಆದರೆ, ಇದು ಜನಸಾಮಾನ್ಯರಿಗೆ ತಲುಪುತ್ತಿದೆಯೇ?

ಶ್ರೀ ಟಿ.ಬಿ. ಜಯಚಂದ್ರ:– ಈಗ ನಿರ್ದಿಷ್ಟವಾಗಿ ತಲುಪುವುದರಲ್ಲಿ ಏನಾದರೂ ವ್ಯತ್ಯಾಸವಾಗುತ್ತಿದೆ, ಮಾನ್ಯ ಶ್ರೀನಿವಾಸ್‌ರವರು ಹೇಳಿದ ರೀತಿಯಲ್ಲಿ ಏನಾದರೂ ಅಪವ್ಯಯವಾಗುತ್ತಿದೆ, ಬೇರೆಯವರಿಗೆ ಹೋಗುತ್ತಿದೆ ಎನ್ನುವುದರ ಬಗ್ಗೆ ನಿರ್ದಿಷ್ಟವಾಗಿರುವಂಥ ಪ್ರಕರಣಗಳೇನಾದರೂ ಇದ್ದು, ಸರ್ಕಾರದ ಗಮನಕ್ಕೆ ತಂದರೆ ಹೇಳುತ್ತೇವೆ.

ಅಧ್ಯಕ್ಷರು:– ನಿರ್ದಿಷ್ಟ ಪ್ರಕರಣಗಳಿದ್ದರೆ ಹೇಳಿ.

ಶ್ರೀ ಶ್ರೀನಿವಾಸ್ ಜಿ.ಹೆಚ್.:– ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳನ್ನು ನೀಡುತ್ತಾರೆ. ಒಂದೆರಡು ಮನೆಗಳಿರುವಂಥ ಕಡೆಗಳಲ್ಲಿ ರಸ್ತೆಗಳನ್ನು ಮಾಡುತ್ತಾರೆ. ನಿಜವಾಗಿ ಯೋಜನೆಗಳ ಲಾಭ ದಲಿತರಿಗೆ ಸಿಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಗಂಗಾ ಕಲ್ಯಾಣ ಯೋಜನೆ, ಮೈಕ್ರೋ ಕ್ರೆಡಿಟ್ ಫೈನಾನ್ಸ್ ಯೋಜನೆ ಈ ರೀತಿಯಾಗಿರುವಂಥ ಯೋಜನೆಗಳೆಲ್ಲವೂ ಸಮರ್ಪಕವಾಗಿ ಜಾರಿಯಾಗುತ್ತಿದೆ.

ಅಧ್ಯಕ್ಷರು:– ಸಚಿವರೇ, ನಿರ್ದಿಷ್ಟವಾದ ಪ್ರಕರಣಗಳ ಮಾಹಿತಿ ಇದ್ದರೆ ಕೊಡುವುದಕ್ಕೆ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಹಣವೂ ಸಹ ವೆಚ್ಚವಾಗುತ್ತಿದ್ದು, ಆರ್ಥಿಕವಾಗಿ ಮತ್ತು ಭೌತಿಕವಾಗಿ ಗುರಿ ಸಾಧನೆಯಾಗುತ್ತಿದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಸಚಿವರೇ ಒಂದು ನಿಮಿಷ ತಾವು yield ಆಗಿ.

ಶ್ರೀ ಟಿ.ಬಿ ಜಯಚಂದ್ರ:– ಪ್ರಶ್ನೆ ಕೇಳಿರುವವರು ಅವರು ನೀವು yield ಆಗಿ ಎನ್ನುತ್ತಿದ್ದೀರಲ್ಲ?

ಶ್ರೀ ಗೋವಿಂದ ಎಂ. ಕಾರಜೋಳ:– ಅವರು ಹೊಸಬರಿದ್ದಾರೆ. ಸರ್ಕಾರ ಏನು ಉತ್ತರ ಕೊಟ್ಟಿದೆಯಲ್ಲ, ಇದಕ್ಕೆ ನಾನು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಸರ್ಕಾರ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಿದೆ. ಜನಸಾಮಾನ್ಯರಿಗೆ ತಲುಪುವಲ್ಲಿ ವಿಫಲವಾಗಿರುವುದು ಗೊತ್ತಿಲ್ಲವೆಂದು ಹೇಳುತ್ತಾರೆ, ಆದರೆ 2,500 ಆಟೋಗಳನ್ನು ಬೇನಾಮಿ ಹೆಸರಿನಲ್ಲಿ ತೆಗೆದುಕೊಂಡು ಇವತ್ತು ಸಿಓಡಿಯಲ್ಲಿ ತನಿಖೆಯಾಗುತ್ತಿದೆ. ಇದ್ದಕ್ಕಿಂತಲೂ ಹೆಚ್ಚಿನ ಉದಾಹರಣೆ ಇನ್ನೇನು ಬೇಕು?

ಅಧ್ಯಕ್ಷರು:– ತನಿಖೆಯಿಂದ ಹೌದು ಎಂದು ರಿಪೋರ್ಟ್ ಬರಬೇಕಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ:– ಅದಕ್ಕಾಗಿ ಹೇಳುತ್ತಿಲ್ಲ, ಗಮನಕ್ಕೇ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಆದರೂ ಸಿಓಡಿ ಗೆ ಪ್ರಕರಣವನ್ನು ವಹಿಸಿದ್ದಾರಲ್ಲ.

ಅಧ್ಯಕ್ಷರು:– ಸಿಓಡಿ ಗೆ ಹೋಗಿದೆ ತಾನೆ, ಇನ್ನೂ ವರದಿ ಬಂದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಗಮನಕ್ಕೆ ಬಂದಿರುವ ಪ್ರಕರಣ ಸಿಓಡಿ ಗೆ ಹೋಗಿದೆ ಎಂದು ಉತ್ತರದಲ್ಲಿ ಹೇಳಬಹುದಲ್ಲ.

ಅಧ್ಯಕ್ಷರು:– ವರದಿ ಬಂದ ಮೇಲೆ ಗೊತ್ತಾಗುತ್ತದೆ ಅಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ:– ಆ ರೀತಿಯಲ್ಲ, ಇವತ್ತು ಪ್ರಶ್ನೆ ಕೇಳಿರುವಂಥ ಶ್ರೀನಿವಾಸ್‌ರವರು ಹೊಸಬರಿದ್ದಾರೆ, ಪ್ರಶ್ನೆಯನ್ನು ಕೇಳಿದ್ದಾರೆ. ಈ ದುರುಪಯೋಗವಾಗುವುದು ನೂರಕ್ಕೆ ನೂರು ಸತ್ಯ. ಮತ್ತೆ ಕೆಲವೇ ಕೆಲವು ಕುಟುಂಬದವರು ತೆಗೆದುಕೊಳ್ಳುತ್ತಿದ್ದಾರೆ. ಅವರು ಕೇಳಿರುವುದರಲ್ಲಿ ಏನೂ

ತಪ್ಪಿಲ್ಲ. ಬೇಕಿದ್ದರೆ ಈಗ ನೀವು ಫೈಲ್ ತರಿಸಿರಿ. ಇಲ್ಲ ಎಂದು ಹೇಗೆ ಹೇಳುತ್ತೀರಿ?

ಅಧ್ಯಕ್ಷರು:– ಕಾರಜೋಳರವರೆ, ಇದು question hour. ಸಮಾಜ ಕಲ್ಯಾಣ ಇಲಾಖೆಯ ವಿಷಯ ಚರ್ಚೆಗೆ ಬಂದಾಗ ನೀವು ಬೇಕಾದ್ದನ್ನು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಹೇಳುವುದು ಎಸ್.ಸಿ./ಎಸ್.ಟಿ. ಜನಾಂಗದ ಹೆಸರಿನ ಮೇಲೆ ಸಂಪೂರ್ಣ ಸಾವಿರಾರು ಕೋಟಿ ರೂಪಾಯಿಗಳು ಪ್ರತಿವರ್ಷ ದುರುಪಯೋಗವಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ:– ತನಿಖೆ ಮಾಡಿಸೋಣ.

ಅಧ್ಯಕ್ಷರು:– ಇದು ಭಾಷೆಯೇ?

ಶ್ರೀ ಗೋವಿಂದ ಎಂ. ಕಾರಜೋಳ:– ಇದು ಭಾಷಣ ಅಲ್ಲ. ನಾನು ಹೇಳುತ್ತಿರುವಂತೆ ನಡೆಯುತ್ತಿದೆ.

ಅಧ್ಯಕ್ಷರು:– ಇದು ಪ್ರಶ್ನೆ, ನಿಮಗೇನಾದರೂ ನಿರ್ದಿಷ್ಟ ಪ್ರಕರಣ ಗೊತ್ತಿದ್ದರೆ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಆದರೆ, ತಪ್ಪು ಮಾಹಿತಿ ಸದನಕ್ಕೆ ಕೊಡಬೇಡಿ ಎಂದು ವಿನಂತಿ ಮಾಡುತ್ತೇವೆ.

ಅಧ್ಯಕ್ಷರು:– ಸಚಿವರು ಇದಕ್ಕೆ ಏನು ಉತ್ತರ ಹೇಳುತ್ತೀರಿ. ನೀವು ತಪ್ಪು ಮಾಹಿತಿ ಕೊಟ್ಟಿದ್ದೀರಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟಿರುವಂಥ ಮಾಹಿತಿ ಸರಿಯಿದೆ. ನೀವು ಹೇಳುತ್ತಿರುವುದು, ಹಿಂದಿನ 5 ವರ್ಷದ್ದು ಸೇರಿಸಿ ಹೇಳುತ್ತಿದ್ದೀರಾ? ಅಥವಾ ಇವತ್ತಿನದು ಹೇಳುತ್ತಿದ್ದೀರಾ?

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಇದು ಒಂದು ವರ್ಷ, 5 ವರ್ಷ ಎಂದು ಅಲ್ಲ, ಕಳೆದ 67 ವರ್ಷಗಳಿಂದ ಇದೇ ನಡೆದುಕೊಂಡು ಬಂದಿದೆ.

(ಗೊಂದಲ)

ಅಧ್ಯಕ್ಷರು:– ಕಾರಜೋಳರವರೆ, ಆ ರೀತಿಯೆಲ್ಲಾ ಮಾತನಾಡುವುದಕ್ಕೆ ಆಗುವುದಿಲ್ಲ. ಇದು ಪ್ರಶ್ನೋತ್ತರ ವೇಳೆ.

ಶ್ರೀ ಟಿ.ಬಿ. ಜಯಚಂದ್ರ:– ದುರುಪಯೋಗವಾಗುತ್ತಿರುವಂಥ ನಿರ್ದಿಷ್ಟವಾದ ಪ್ರಕರಣಗಳು ಯಾವುದಾದರೂ ಇದ್ದರೆ, ಅದನ್ನು ಗಮನಕ್ಕೆ ತೆಗೆದುಕೊಳ್ಳೋಣ. ಅದರ ಮೇಲೆ ಯಾವುದೇ ಅನುಮಾನ ಇಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಕಾರಜೋಳರವರೆ, ತಾವು ಹಿಂದೆ ಸಚಿವರಾಗಿದ್ದಿರಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಗಮನಕ್ಕೆ ಬಂದಿಲ್ಲವೆಂದರೆ ಏನರ್ಥ? ಅಧಿಕಾರಿಗಳಿಗೆ ಗೊತ್ತಿಲ್ಲವೇ?

(ಗೊಂದಲ)

ಅಧ್ಯಕ್ಷರು:– ಅವರಿಗೆ ಗೊತ್ತಿದ್ದೇ ಹೇಳುತ್ತಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ತಪ್ಪು ಉತ್ತರ ಕೊಟ್ಟಿದ್ದಾರಲ್ಲ. ದಯಮಾಡಿ ತಪ್ಪು ಉತ್ತರ ಕೊಟ್ಟವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:– ಕಾರಜೋಳರಿದ್ದರೂ, ಆಂಜನೇಯರವರು ಇದ್ದರೂ, ಸರ್ಕಾರ ನಿರಂತರವಾಗಿ ಇರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಿರುವಂಥ ಮಾತಿನಲ್ಲಿ ಯಾವುದೇ ರೀತಿಯ ಆಧಾರ ಇಲ್ಲ. ಆಧಾರ ಇರುವಂಥ ವರ್ತಮಾನವನ್ನು ಕೊಟ್ಟರೆ ನಾವು ಉತ್ತರ ಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ನಾನು ನೇರವಾಗಿ ಹೇಳುತ್ತಿದ್ದೇನೆ. ಸಿಒಡಿ ತನಿಖೆಯಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ:– ಸಿಒಡಿ ತನಿಖೆಯಾಗುತ್ತಿರುವುದು ಯಾವ ಮಟ್ಟಕ್ಕಿದೆ ಎನ್ನುವ ಉತ್ತರವನ್ನು ಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಅಂಬೇಡ್ಕರ್ ನಿಗಮದಲ್ಲಿ ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಆಟೋರಿಕ್ಷಾಗಳನ್ನು ಕೊಟ್ಟಿರುವುದು ದುರುಪಯೋಗವಾಗಿದೆ.

ಅಧ್ಯಕ್ಷರು:– ಸತ್ಯವೋ ಅಥವಾ ಅಸತ್ಯವೋ ಎಂದು ಆ ರಿಪೋರ್ಟ್ ಬರಬೇಕಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ:– ಈ ಶತಮಾನದಲ್ಲಿ ರಿಪೋರ್ಟ್ ಬರುವುದಿಲ್ಲ. ಮುಂದೆ ಒಂದು ದಿನ ಎಲ್ಲರೂ ಸತ್ತಿದ್ದಾರೆ ಎಂದು close ಮಾಡಿಬಿಡುತ್ತಾರೆ.

ಅಧ್ಯಕ್ಷರು:– ಅದು ನಿಮ್ಮ ಭ್ರಮೆ. ಸಚಿವರೇ, ಆದಷ್ಟು ಬೇಗ ರಿಪೋರ್ಟ್‌ನ್ನು ತರಿಸಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು hold ಮಾಡಿಸಿ, ವರದಿ ತರಿಸಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು hold ಮಾಡುವುದೇನೂ ಬೇಕಿಲ್ಲ. ಅವರು ಹೇಳುತ್ತಿರುವಂಥ ಸಿಒಡಿ enquiryಯ ರಿಪೋರ್ಟ್ ಆದಷ್ಟು ಬೇಗ ತರಿಸುತ್ತೇವೆ.

(ಗೊಂದಲ)

ಅಧ್ಯಕ್ಷರು:– ಈ ರೀತಿಯಾದರೆ ಕೆಲಸ ಆಗುತ್ತದೆಯೇ? ನಿಮಗೆ ನಿರ್ದಿಷ್ಟ ಪ್ರಕರಣಗಳು ಗೊತ್ತಿದ್ದರೆ ಮಾಹಿತಿ ಕೊಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಆ ರೀತಿ ಇದ್ದಿದ್ದೇ ಆದರೆ ಆದಷ್ಟು ಬೇಗ enquiry ಮಾಡಿಸಿ ಉತ್ತರ ಕೊಡುವಂಥ ಕೆಲಸ ಮಾಡುತ್ತೇವೆ. ನಿಮಗೆಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ:– ನಿಮಗೆಷ್ಟು ಕಳಕಳಿ ಇದೆ ಎನ್ನುವ ಸಲುವಾಗಿಯೇ ಹೇಳುತ್ತಿದ್ದೇನೆ. ವರದಿಯನ್ನು ತರಿಸಿ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ತನಿಖೆ ಮಾಡಲಿ.

ಶ್ರೀ ಟಿ.ಬಿ. ಜಯಚಂದ್ರ:– ನಿಮಗೆ ಎಷ್ಟು ಕಳಕಳಿ ಇದೆ ಅಷ್ಟೇ ಕಳಕಳಿ ಈ ಭಾಗದಲ್ಲಿಯೂ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ನಿಗದಿಯಾಗಿರುವಂಥ ಹಣದಲ್ಲಿ ಅಪವ್ಯಯ ಆಗಿರುವುದಾರೆ, ಅದನ್ನು ಸರ್ಕಾರ ಸಹಿಸುವುದಿಲ್ಲ. ಅದು ಯಾರೇ ಆಗಿದ್ದರೂ ಸಹ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮೊದಲು ನಿಮ್ಮ ಸಿಒಡಿ ಅಧಿಕಾರಿಗಳ ಮೇಲೆ action ತೆಗೆದುಕೊಳ್ಳಬೇಕಾಗುತ್ತದೆ. ಎಷ್ಟು ವರ್ಷಗಳಿಂದ pending ಇಡುತ್ತಾರೆ? ರಿಪೋರ್ಟ್ ಬಂದಿಲ್ಲ, ರಿಪೋರ್ಟ್ ತರಿಸಬೇಕು.

(ಗೊಂದಲ)

ಅಧ್ಯಕ್ಷರು:– ರಿಪೋರ್ಟ್ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಗೃಹ ಸಚಿವರು ಇಲ್ಲೇ ಇದ್ದಾರಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಗೃಹ ಸಚಿವರಿಗೂ ಹೇಳುತ್ತಿದ್ದೇನೆ. ಅವರು ಆಗಲೇ ನನ್ನ ಮುಖವನ್ನು ನೋಡಿದರು.

ಶ್ರೀ ಟಿ.ಬಿ. ಜಯಚಂದ್ರ:– ಅಧ್ಯಕ್ಷರೆ ಈಗ ಗಮನಕ್ಕೆ ತಂದಿದ್ದಾರೆ.

ಅಧ್ಯಕ್ಷರು:– ಗೃಹ ಸಚಿವರೇ ನೋಡಿ, ಸಿಒಡಿ ಗೆ ಹೋಗಿರುವುದು ರಿಪೋರ್ಟ್ ಏನಾದರೂ ಬಂದಿದ್ದರೆ ತರಿಸಿಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಆಟೋರಿಕ್ಷಾ ಕೊಟ್ಟಿರುವುದನ್ನು ಬೇರೆಯವರು ಪಡೆದುಕೊಂಡಿದ್ದಾರೆ.

ಅಧ್ಯಕ್ಷರು:– ಶ್ರೀನಿವಾಸ್‌ರವರೆ, ನೀವು ಸರಿಯಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ / ಮಂಡಳಿಗಳ ಯೋಜನೆಗಳು ಜನ ಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದಾನೆ.

ಅಧ್ಯಕ್ಷರು:– 'ಇಲ್ಲ' ಎಂದು ಉತ್ತರ ನೀಡಿದ್ದಾರೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಇವರು ನೀಡಿರುವ ಉತ್ತರ ತಪ್ಪಾಗಿದೆ. ಉದಾಹರಣೆ ಸಮೇತ ಕೊಡುತ್ತೇನೆ.

ಅಧ್ಯಕ್ಷರು:– ನಿಮ್ಮ ಬಳಿ ನಿರ್ದಿಷ್ಟ ಪ್ರಕರಣಗಳಿದ್ದರೆ ಹೇಳಿ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಟ್ರಾಕ್ಟರ್‌ಗಳಿರಬಹುದು, ಆಟೋರಿಕ್ಷಾಗಳಿರಬಹುದು, ರಸ್ತೆಗಳಿರಬಹುದು, ಇವೆಲ್ಲವನ್ನೂ ಬೇರೆಯವರು ಕಣ್ಣಿಗೆ ಕಾಣುವಂತೆ ಪಡೆಯುತ್ತಿದ್ದಾರೆ.

ಅಧ್ಯಕ್ಷರು:– ಯಾವುದಾದರೂ ನಿರ್ದಿಷ್ಟ ಪ್ರಕರಣಗಳು ನಿಮಗೆ ಗೊತ್ತಿದ್ದರೆ ಅದನ್ನು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಮುಂದಿನ ಸದನದೊಳಗಾಗಿ ಪ್ರಕರಣಗಳ ಮಾಹಿತಿ ಕೊಡುತ್ತೇನೆ.

ಅಧ್ಯಕ್ಷರು:– ಆಯಿತು, ಕೊಡಿ. ಆಮೇಲೆ ನೋಡೋಣ.

ಶ್ರೀ ಟಿ.ಬಿ. ಜಯಚಂದ್ರ:– ಅವರು ನಿರ್ದಿಷ್ಟ ಪ್ರಕರಣಗಳನ್ನು ಕೊಟ್ಟರೆ ಅದರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.